
# ಕನ್ನಡ ಪತ್ರಿಕೋದ್ಯಮ ಮತ್ತು ಲಂಕೇಶ್




**ಶ್ರೀಧರ್ ಆರ್.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮಾಗಡಿ, ರಾಮನಗರ.

**Article Link: https://aksharasurya.com/2024/04/sridhar-r.php**

**DOI: https://doi.org/10.5281/zenodo.10937976**

ಪಿ. ಲಂಕೇಶ್ ಈ ನಾಡಿನ ಬಹುಮುಖ್ಯವಾದ ಸಾಂಸ್ಕೃತಿಕ ವಿದ್ಯಮಾನ. ಜಾಣ, ಜಾಣೆಯರಾದ ಕನ್ನಡದ ಮನಸ್ಸುಗಳಿಗೆ ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ತಮ್ಮ ಪತ್ರಿಕೆ, ಸಾಹಿತ್ಯ ಬರಹಗಳ ಮೂಲಕ ಜಾತ್ಯತೀತ ವಿವೇಕ ಹಾಗೂ ಸಮಾಜದ ಆರೋಗ್ಯಕ್ಕೆ ಮಾರಕವಾದ ಕೆಡುಕಿನ ಪ್ರವೃತ್ತಿಗಳಿಗೆ ಎದುರಾಗಿ 'ಗುಣಮುಖ'ರಾಗುವ ಮನಸ್ಥಿತಿಯನ್ನು ರೂಪಿಸಿದವರು.

1980 ಜುಲೈ 6 ರಂದು 'ಲಂಕೇಶ್ ಪತ್ರಿಕೆ' ಮೊದಲ ಸಂಚಿಕೆ ಬಿಡುಗಡೆಯಾಯಿತು. ಸಂಪಾದಕರ ಹೆಸರನ್ನೇ ಹೊತ್ತು ಸೃಷ್ಟಿಯಾದ ಪತ್ರಿಕೆಗೆ ಇದ್ದ ಟ್ಯಾಗ್ ಲೈನ್ 'ರಂಜನೆ, ಬೋಧನೆ, ಪ್ರಚೋದನೆ'. 'ಟೀಕೆ–ಟಿಪ್ಪಣಿ', 'ಮರೆಯುವ ಮುನ್ನ', 'ಈ ಸಂಚಿಕೆ', 'ನೀಲು ಪದ್ಯಗಳು' ಇವುಗಳಲ್ಲಿ ನಿರಂತರವಾಗಿ ಸರಿಸುಮಾರು 20 ವರ್ಷಗಳ ಕಾಲ ಲಂಕೇಶ್ ರಾಜಕೀಯ, ಸಿನಿಮಾ, ಕ್ರೀಡೆ, ಸಾಹಿತ್ಯ ಬರಹಗಳ ಜೊತೆಗೆ ತಮ್ಮ ಪಂಚೇಂದ್ರಿಯಗಳ ಗ್ರಹಿಕೆಗೆ ನಿಲುಕಿದ ಮನುಷ್ಯನ ಮೂಲಭೂತ ಪ್ರವೃತ್ತಿ, ಆಳದ ತಲ್ಲಣಗಳು, ಖಾಸಗಿ ವಿಚಾರಗಳನ್ನು ಬರೆದಿದ್ದಾರೆ. ಸಮಾಜವಾದಿ ಚಿಂತಕ ಡಾ. ರಾಮಮನೋಹರ ಲೋಹಿಯಾ ತಮ್ಮ'ಮ್ಯಾನ್ ಕೈಂಡ್' ಪತ್ರಿಕೆಗೆ ಬರೆಯುತ್ತಿದ್ದ ಸಂಪಾದಕೀಯ ಬರಹಕ್ಕೆ ಅವರು ನೀಡಿದ್ದ ಶೀರ್ಷಿಕೆ 'ನೋಟ್ ಅಂಡ್ ಕಾಮೆಂಟ್ಸ್' ಎಂಬುದನ್ನು ನಾವಿಲ್ಲಿ ಸ್ಮರಿಸಬಹುದು.

ಪತ್ರಿಕೋದ್ಯಮಕ್ಕೆ ಲಂಕೇಶ್ ಸ್ವತಂತ್ರರಾಗಿ ಕಾಲಿರಿಸುವಷ್ಟರಲ್ಲೆ ಅವರು ಕವಿ, ನಾಟಕಕಾರ, ಲೇಖಕರಾಗಿ, ಸಿನಿಮಾ ನಿರ್ದೇಶಕರಾಗಿ ಸಾಂಸ್ಕೃತಿಕ ವಲಯದಲ್ಲಿ ಪರಿಚಿತರಾಗಿದ್ದರು.

'ಕರ್ನಾಟಕ ಬರಹಗಾರರ ಕಲಾವಿದರ ಒಕ್ಕೂಟ'ದ ಸ್ಮರಣ ಸಂಚಿಕೆಯಾಗಿ ರೂಪುಗೊಂಡ 'ಪಾಂಚಾಲಿ' (ದೀಪಾವಳಿ–ರಾಜ್ಯೋತ್ಸವ ವಿಶೇಷ ಸಂಚಿಕೆ, 1974)

ಸಂಪಾದಕರಾಗಿದ್ದರು. ಪ್ರಜಾವಾಣಿಯಲ್ಲಿ ತಾವು ಬರೆಯುತ್ತಿದ್ದ ಅಂಕಣದಲ್ಲಿ ಬಳಸುತ್ತಿದ್ದ 'ಬಂ, ಗುಂ, ಬರ್ತೂರು ಗ್ರಾಮ ಪಂಚಾಯಿತಿ, ನಮ್ಮ ರಾಮು, ಬುದ್ಧ್ಯೋರು' ಈ ತರದ ವಿಶಿಷ್ಟ ನುಡಿಗಟ್ಟುಗಳ ಮೂಲಕ ಓದುಗರಲ್ಲಿ ಹೊಸ ಸಂವೇದನೆ, ಸಹಜ ಕುತೂಹಲವನ್ನುಂಟುಮಾಡಿದ್ದರು. ಲಂಕೇಶರ ಬರಹದ ಹಿಂದಿರುವ ತುಡಿತ, ನಿಷ್ಠುರತೆಯನ್ನು ಆ ಪತ್ರಿಕೆ ಅರಗಿಸಿಕೊಳ್ಳಲಾಗಲಿಲ್ಲ ಅದರ ಪರಿಣಾಮವಾಗಿ ಅವರು ಬರೆಯುತ್ತಿದ್ದ ಅಂಕಣ ಅಲ್ಪಾವಧಿಯಲ್ಲೆ ಕೊನೆಗೊಂಡಿತು.

ಸೆಂಟ್ರಲ್ ಕಾಲೇಜಿನಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಲವು ವರ್ಷಗಳ ಕಾಲ ಇಂಗ್ಲಿಷ್ ಅಧ್ಯಾಪಕರಾಗಿದ್ದ ಲಂಕೇಶ್ ಅಕಾಡೆಮಿಕ್ ವಲಯದ ಏಕತಾನತೆಯಿಂದ ತಮ್ಮ ಸೃಜನಶೀಲತೆ ಬಳಲುತ್ತಿರುವುದನ್ನು ಮನಗಂಡು ಅಲ್ಲಿಂದ ಹೊರಬಂದರು. 'ಈ ಅಧ್ಯಾಪಕ ವೃತ್ತಿ ಒಂದು ರೀತಿಯ ಇಕ್ಕಟ್ಟಾದ ಓಣಿಯಂತೆ, ನನ್ನ ವ್ಯಕ್ತಿತ್ವವನ್ನು ನಾಶಪಡಿಸಬಲ್ಲ ಮಾತಿನ ಕಸುಬಿನಂತೆ ಕಾಣ ತೊಡಗಿತ್ತು. ನನ್ನ ಕನಸುಗಳೆಲ್ಲ ದಿನ ನಾಲ್ಕೈದು ಗಂಟೆ ಮಾತನಾಡುವ ವೃತ್ತಿಯಲ್ಲಿ ಪರ್ಯಾವಸಾನಗೊಂಡಂತೆ ಅನ್ನಿಸತೊಡಗಿತ್ತು' ಎಂದು ತಮ್ಮ 'ಹುಳಿಮಾವಿನಮರ' ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ.

'ನನ್ನ ನೆಮ್ಮದಿಯನ್ನು ನಾನೇ ಕಲಕುವ ಮತ್ತು ಹೊಸ ಬಗೆಯ ವಿಶ್ವಾಸ ಹುಡುಕುವ ಚಟ ಮತ್ತು ಛಲ ನನ್ನಿಂದ ಮರೆಯಾಗದಿರಲಿ' ಎಂದು ಆಶಿಸುತ್ತ, ತಾವು ಗಳಿಸಿದ್ದನ್ನು ಪಣಕ್ಕಿಟ್ಟು ನೋಡುವ ರಿಸ್ಕ್ ತೆಗೆದುಕೊಂಡ ಲಂಕೇಶ್ ಜನತೆಯ ನಾಡಿಮಿಡಿತ, ಸಾಮೂಹಿಕ ಆಶೋತ್ತರಗಳಿಗೆ ಸ್ಪಂದಿಸುವ, ರೂಢಿಗತ ಸಿದ್ಧಮಾದರಿಗಳಿಗೆ ಒಗ್ಗದಿರುವ ಭಿನ್ನಮತದ ನಿಲುವುಗಳ ಮಾಧ್ಯಮವಾಗಿ ವೈವಿಧ್ಯಮಯ ಬರಹಗಳ ಮೂಲಕ ಟ್ಯಾಬ್ಲಾಯ್ಡ್ ಪತ್ರಿಕೆಗೆ ಜೀವತುಂಬಿದರು. ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರು ಲಂಕೇಶ್ ಹಾಗೂ ವಿನೋದ್ ಮೆಹ್ತಾ ಇವರಿಬ್ಬರೂ ತಮ್ಮ ಮೇಲೆ ಉಂಟುಮಾಡಿದ ಪ್ರಭಾವ ಹಾಗೂ ಲಂಕೇಶರ ಲೋಕದೃಷ್ಟಿಯನ್ನು ಕುರಿತು "ಲಂಕೇಶರು ಜಗತ್ತನ್ನು ಅತ್ಯಂತ ಮಾನವೀಯವಾಗಿ, ವಿಶಾಲವಾಗಿ ಯಾವುದೇ ದೇಶ, ಭಾಷೆ, ಜಾತಿ, ಧರ್ಮದ ಸಂಕೋಲೆಗಳನ್ನು ಧರಿಸಿದೆ ಎಲ್ಲರನ್ನೂ ಒಳಗೊಳ್ಳುವಂತೆ ಗ್ರಹಿಸುತ್ತಿದ್ದರು. ಆಧುನಿಕತೆ, ಅಂತಾರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವಕ್ಕೆ ಅವರ ಚಿಂತನಾ ಲಹರಿಯಲ್ಲಿ ವಿಶೇಷ ಒತ್ತಿತ್ತು. ಗಾಂಧಿ, ಬುದ್ಧನ ವ್ಯಕ್ತಿತ್ವವನ್ನು ಅವರು ಬೆರಗುಗಣ್ಣಿಗಳಿಂದ ನೋಡುತ್ತಲೇ, ಆಂತರ್ಯದಲ್ಲಿ ಒಂದು ತರಹದ ಸೃಜನಶೀಲ ಅನುಮಾನ ಮತ್ತು ಅರಾಜಕತೆಯನ್ನು ಪೋಷಿಸಿಕೊಂಡಿದ್ದರು.

ನನಗೇ ಅರಿಯದೆ ನನ್ನ ಜೀವನದ ಒಲವು, ನಿಲುವು, ಆಯ್ಕೆಗಳಿಗೆ

ಲಂಕೇಶರ ಬರವಣಿಗೆ ಪ್ರಭಾವಿ ಶಕ್ತಿಯಾಗಿ ಕೆಲಸಮಾಡಿತ್ತು... ಲಂಕೇಶ್ ತಮ್ಮ ಪತ್ರಿಕೆಯನ್ನು 'ಖಾಯಂ ವಿರೋಧಪಕ್ಷ'ವಾಗಿ ಕಂಡರು. ವಿನೋದ್ ಮೆಹ್ತಾ "ಯಾವನೇ ಅಧಿಕಾರಸ್ಥ ನಮಗೆ ಗೆಳೆಯನಾಗಲು (friend) ಸಾಧ್ಯವಿಲ್ಲ. ಅವನು ಪರಿಚಯಸ್ಥ (acquaintance) ಮಾತ್ರ ಆಗಿರಬೇಕು," ಎಂದು ಹೇಳುತ್ತಿದ್ದರು. ಈ ಇಬ್ಬರೂ ಅಧಿಕಾರಸ್ಥರಿಂದ ಅಂತರ ಕಾಯ್ದುಕೊಳ್ಳುತ್ತಿದ್ದ ರೀತಿ ಅನನ್ಯವಾಗಿತ್ತು...

ಲಂಕೇಶರು ಕರ್ನಾಟಕದಲ್ಲಿ ತಮ್ಮ ಪತ್ರಿಕೆಯ ಮೂಲಕ ಎರಡು ದಶಕಗಳ ಕಾಲ ಅತ್ಯಂತ ತೀಕ್ಷ್ಣ ರಾಜಕೀಯ ಮತ್ತು ಸಾಂಸ್ಕೃತಿಕ ಸಂಭಾಷಣೆಯನ್ನು ಮಾತ್ರ ಬೆಳಸಲಿಲ್ಲ, ಒಂದು ಅಮೂರ್ತ ಹಾಗೂ ವಿಶಾಲ ನೈತಿಕ ಜಗತ್ತನ್ನೂ (moral universe) ಜೊತೆ ಜೊತೆಗೇ ಕಟ್ಟುತ್ತಾ ಹೋದರು. ಜೀವನೋಲ್ಲಾಸ ತುಂಬಿಕೊಂಡಿದ್ದ ಈ ಜಗತ್ತು, ನನ್ನನ್ನೂ ಒಳಗೊಂಡಂತೆ ಕರ್ನಾಟಕದ ಅನೇಕ ಯುವಕರಿಗೆ ಸುಪ್ತವಾದ ಹೆಮ್ಮೆಯನ್ನು, ಭವಿಷ್ಯದ ಬಗ್ಗೆ ಆಶಾಭಾವನೆಯನ್ನು, ಸಮಾಜದ ಕ್ರೌರ್ಯವನ್ನು ಎದುರಿಸುವ ಬೌದ್ಧಿಕ ಅಸ್ತ್ರಗಳನ್ನು ವಾರದಿಂದ ವಾರಕ್ಕೆ ಸರಬರಾಜು ಮಾಡುತ್ತ ಹೋಯಿತು.

ಲಂಕೇಶರು ಕನ್ನಡದಲ್ಲಿ ಬರೆಯುತ್ತಿದ್ದರೂ ಇಡೀ ವಿಶ್ವ ಅವರ ಆಡಂಬೊಲವಾಗಿರುತ್ತಿತ್ತು. ದೇಸಿಯ ಸೊಕ್ಕು, ಪ್ರಾದೇಶಿಕ ಸಂಕುಚಿತತೆ, ಭಾಷೆಯ ದುರಭಿಮಾನ ಅವರಲ್ಲಿ ಎಂದೂ ತಲೆ ಎತ್ತಲಿಲ್ಲ. ನಾನು ಕರ್ನಾಟಕ ಬಿಟ್ಟು ಓದಲು, ಕೆಲಸ ಮಾಡಲು ಬೇರೆ ಪ್ರದೇಶಗಳಿಗೆ, ವಿದೇಶಗಳಿಗೆ ಹೋದಾಗ ಅಲ್ಲಿನ ನನ್ನ ಗೆಳೆಯರೊಂದಿಗಿನ ಸಂಭಾಷಣೆಯಲ್ಲಿ ಯಾವುದೇ ವಿಚಾರದ ಬಗ್ಗೆಯಾಗಲೀ (ಫ್ರೆಂಚ್ ರಾಜಕಾರಣ, ಅಮೆರಿಕದ ದುರ್ನಡತೆ, ಪೂರ್ವ ಯುರೋಪಿನ ಕಮ್ಯುನಿಸಂನ ಅವಾಂತರಗಳು, ವಿಂಬಲ್ಡನ್ ನ ಹಸಿರು ಹಾಸಿನ ಟೆನಿಸ್ ಅಥ ವಾ ಬ್ರಿಟನ್ ನ ಬ್ಯಾಂಕಿಂಗ್ ವ್ಯವಸ್ಥೆ, ಇತ್ಯಾದಿ) ಒಂದು ಖಚಿತತೆ, ಆತ್ಮವಿಶ್ವಾಸದ ಅಭಿಪ್ರಾಯದ ಮಂಡನೆ ಸಾಧ್ಯವಾಗುತಿತ್ತು ಎಂದು ತಿಳಿದಾಗಲೆಲ್ಲ, ಅದರ ಹಿಂದೆ ಲಂಕೇಶರು ಬಸವನಗುಡಿಯ ಒಂದು ಸಣ್ಣಕೋಣೆಯಲ್ಲಿ ಕೂತು ವಿಶ್ವಪರ್ಯಟನೆ ಮಾಡಿದ ಫಲವಿದು ಎಂಬ ಕೃತಜ್ಞತೆಯ ಭಾವ ಮೂಡುತ್ತಿತ್ತು.

ಕನ್ನಡ, ಕರ್ನಾಟಕದ ಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆದ ನನ್ನಂಥ ಅನೇಕರಿಗೆ ಲಂಕೇಶರು ತಮ್ಮ ಬರವಣಿಗೆಯ ಮೂಲಕ ಜಗತ್ತನ್ನು ಎದುರಿಸುವ, ಹಂಗಿಸುವ, ಓಲೈಸುವ, ಪ್ರೀತಿಸುವ, ಸವಾಲೆಸೆಯುವ ಶಕ್ತಿ ಕೊಟ್ಟರು. ನನ್ನ ತಲೆಮಾರಿನವರು ಕುವೆಂಪುರವರ ಸೃಜನಶೀಲತೆ ಮತ್ತು ಸಮಾನತೆಯ ಧ್ಯಾನ, ಕಾರಂತರ ವೈಚಾರಿಕತೆ ಮತ್ತು ರಾಕ್ಷಸ ಶಕ್ತಿ, ಬೇಂದ್ರೆಯ ಮಾಯಾ ವಿಹಾರ

ಮತ್ತು ಹೆಂಗರುಳು (femininity) ಎಲ್ಲವನ್ನೂ ಲಂಕೇಶರಲ್ಲಿ ಕಂಡರು ಎಂದರೆ ತಪ್ಪಾಗಲಾರದು. ಒಬ್ಬ ದೊಡ್ಡ ಬರಹಗಾರ ತನ್ನ ಸಾಂಸ್ಕೃತಿಕ ಪೂರ್ವಜರ ಒಳಿತನ್ನು ಮೈಗೂಡಿಸಿಕೊಂಡಿರುತ್ತಾನೆ ಎಂಬುದಕ್ಕೆ ಲಂಕೇಶ್ ಸಾಕ್ಷಿ ಆಗಿದ್ದರು." ('ಲಂಕೇಶರ ಲೋಕದೃಷ್ಟಿ, ಹಾರೈಕೆ, ಒಂಟಿತನ, ಇತ್ಯಾದಿ..' ಏಪ್ರಿಲ್, 2016) ಎಂದು ತಮ್ಮ ಲೇಖನದಲ್ಲಿ ಬರೆದಿರುವುದು ಅರ್ಥಪೂರ್ಣವಾಗಿದೆ.

ನಾವು ಜೀವಿಸಿರುವ ಇಲ್ಲಿನ ವ್ಯವಸ್ಥೆಯಲ್ಲಿನ ಅನ್ಯಾಯ, ಜನವಿರೋಧಿ ಆಡಳಿತ ನೀತಿಗಳು, ಮೂಲಭೂತವಾದ, ರಾಜಕೀಯ ಭ್ರಷ್ಟತೆ, ನಮ್ಮೊಳಗಿನ ದುರಾಚಾರ, ನಿಷ್ಕ್ರಿಯತೆ ಇವುಗಳು ಮುಂದಿನ ತಲೆಮಾರಿಗೆ ರವಾನೆಯಾಗುವ ಹೊರೆಯಾಗದಂತೆ ಎಚ್ಚರಿಸುತ್ತಿದ್ದ, ತಿದ್ದುತ್ತಿದ್ದ ಲಂಕೇಶ್ ಅವರ ಬರಹಗಳು ಅವರನ್ನು ಇಂದಿಗೂ 'ಲಂಕೇಶ್ ಇದ್ದಿದ್ದರೆ..?' ಎಂದು ಒಂದು ಕ್ಷಣ ಆಲೋಚಿಸುವಂತೆ ಮಾಡುತ್ತಿರುವುದು ಅವರ ಪತ್ರಿಕೆ ನಿಭಾಯಿಸಿದ ಬಹುಮುಖ್ಯವಾದ ಸಾಮಾಜಿಕ ಹೊಣೆಗಾರಿಕೆಯನ್ನು ಮನಗಾಣಿಸುತ್ತದೆ.

ಲಂಕೇಶರ ಆಪ್ತ ಒಡನಾಡಿಯಾಗಿದ್ದ ಬಿ. ಚಂದ್ರೇಗೌಡರು ಇತ್ತೀಚೆಗಿನ 'ಲಂಕೇಶ್ ಜೊತೆಗೆ...' ಎಂಬ ತಮ್ಮ ಪುಸ್ತಕದಲ್ಲಿ ಗಾಂಧೀಜಿ ತಮ್ಮ ಹೋರಾಟದಲ್ಲಿ ಅಳವಡಿಸಿಕೊಂಡಿದ್ದ 'ಅಸ್ಪೃಶ್ಯತೆಯ ನಿವಾರಣೆ' 'ಸ್ತ್ರೀಯರ ಸಬಲೀಕರಣ' 'ಹಿಂದೂ ಮುಸ್ಲಿಂ ಸಾಮರಸ್ಯ' ಎಂಬ ಮೂರು ಮುಖ್ಯ ಕಾರ್ಯಕ್ರಮಗಳನ್ನು ಲಂಕೇಶ್ ತಮ್ಮ ಪತ್ರಿಕೆಯ ಮೂಲಕ ಮಾಡಿದರು ಎಂದು ಬರೆದಿರುವುದು ಒಪ್ಪುವಂತದ್ದು. ಲಂಕೇಶ್ ಸಮಾಜವಾದಿ ನೋಟವುಳ್ಳ ತಮ್ಮ ಪತ್ರಿಕೆಯ ಮೂಲಕ ದಲಿತರು, ಮುಸ್ಲಿಮರು, ಹಿಂದುಳಿದ ವರ್ಗಗಳು ಹಾಗೂ ತಬ್ಬಲಿ ಸಮುದಾಯಗಳ ಹಿನ್ನೆಲೆಯ ಬರಹಗಾರ/ ಬರಹಗಾರ್ತಿಯರಿಗೆ ಅವಕಾಶವನ್ನು ಕಲ್ಪಿಸಿ ಅಲ್ಲಿಯವರೆಗೂ ಲೋಕದ ಕಣ್ಣಿಗೆ ಬೀಳದೆ ಕರಗಿ ಹೋಗುತ್ತಿದ್ದ ಸಮುದಾಯಗಳ ಅನುಭವ ಲೋಕವನ್ನು ಓದುಗರಿಗೆ ನೀಡಿದರು. ಹಿಂಜರಿಕೆ ಹಾಗೂ ಅಳುಕಿನಿಂದ ಬರಹದ ಮುಖ್ಯವಾಹಿನಿಯಿಂದ ದೂರ ಉಳಿದಿದ್ದವರ ಅಭಿವ್ಯಕ್ತಿಗೆ ಸಂಪಾದಕರು ತಮ್ಮ ಪತ್ರಿಕೆಯ ಮೂಲಕ ನೀಡಿದ ಪ್ರೋತ್ಸಾಹ ಹಾಗೂ ಅವಕಾಶ ಅವರನ್ನು ಲೇಖಕರನ್ನಾಗಿ ರೂಪಿಸಿತು. 'ಪತ್ರಿಕೆಯೊಂದಕ್ಕೆ ಜೀವ ಇರಬೇಕಾದರೆ ಆ ಪತ್ರಿಕೆಯ ನಾಯಕನಿಗೆ ತೀವ್ರ ನ್ಯಾಯವಂತಿಕೆ, ನಿಷ್ಟುರತೆ, ಬಂಡಾಯದ ಗುಣ ಬೇಕೇ ಬೇಕಾಗುತ್ತದೆ. ನೀಚತನ ಕಂಡಲ್ಲಿ ಭೂತ ಬಿಡಿಸುವ, ಧಿಕ್ಕರಿಸುವ ಗುಣವಿಲ್ಲದ ಪತ್ರಿಕೆ ನೀಚತನದ ಪಾಲುದಾರ ಆಗುತ್ತದೆ. ಆದ್ದರಿಂದಲೇ ನಿಶ್ಚಯ ಪ್ರಾಮಾಣಿಕತೆ ಮತ್ತು ಉಗ್ರ ನಿಷ್ಠುರತೆಯ ವ್ಯಕ್ತಿ ಏಕಾಂಗಿತನ ಮತ್ತು ತಬ್ಬಲಿತನವನ್ನು ಕಟ್ಟಿಕೊಂಡೇ ಬದುಕುತ್ತಾನೆ' ಎಂದು ತಮ್ಮ 'ಟೀಕೆ–ಟಿಪ್ಪಣಿ'ಯಲ್ಲಿ ಬರೆದ ಲಂಕೇಶ್ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ತಾವೇ

ಕಟ್ಟಿಕೊಂಡಿದ್ದ ಸಂಹಿತೆ, ನಿರ್ಧರಿಸಿದ್ದ ಧೋರಣೆಯ ಉಳಿವಿಗಾಗಿ ಓದುಗರ ವಿಶ್ವಾಸ, ಅಭಿಮಾನವನ್ನೇ ನೆಚ್ಚಿ, ಜಾಹೀರಾತುಗಳಿಲ್ಲದೆ ಪತ್ರಿಕೆಯನ್ನು ನಡೆಸುವ ದಿಟ್ಟತನ ತೋರಿದ್ದು ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲೇ ನೆನಪಿಡುವಂತದ್ದು.

ಬೌದ್ಧಿಕ ನೇಕಾರ, ಸಂಸ್ಕೃತಿ ಚಿಂತಕ ಡಿ.ಆರ್. ನಾಗರಾಜ್ ಅವರಿಂದ 'ಶತಮಾನದ ಪ್ರತಿಭೆ' ಎಂದು ಕರೆಸಿಕೊಂಡ, 'ಇಟ್ಟಿಗೆ ಪವಿತ್ರವಲ್ಲ; ಜೀವ ಪವಿತ್ರ' ಎಂದು ಬರೆದ, 'ನಾವು ಕೊಟ್ಟಿದ್ದಕ್ಕಿಂತ ಹೆಚ್ಚಿನ ಸ್ನೇಹ ಕೊಡುವವರು ದಲಿತರು ಮತ್ತು ಮುಸ್ಲಿಮರು' ಎಂದು ನುಡಿದ, ನಮ್ಮ ಲೇಖಕರು, ಚಿಂತಕರು 'ಮೇಷ್ಟ್ರು' ಎಂದು ಅಭಿಮಾನದಿಂದ ಸ್ಮರಿಸಿಕೊಳ್ಳುವ, ಇಂದಿಗೂ ಅನೇಕ ಸೂಕ್ಷ್ಮ ಮನಸ್ಸಿನವರ ನೋಟ, ಸಂವೇದನೆ, ಪ್ರಜ್ಞೆಯಲ್ಲಿರುವ ಲಂಕೇಶರನ್ನು, ಕಣ್ಣಾರೆ ನೋಡದಿರುವ ಹೊಸ ತಲೆಮಾರಿನವರು, ಹದಿಹರೆಯದ ಜಾಣ, ಜಾಣೆಯರು ಫೇಸ್ಬುಕ್, ವಾಟ್ಸಾಪ್ ಮುಂತಾದ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಅವರ ಬರಹಗಳ ತುಣುಕುಗಳ ಮೂಲಕ ಆಗಾಗ ಮನನ ಮಾಡುತ್ತಿರುವುದು– ಲಂಕೇಶರ ಅನುಪಸ್ಥಿತಿಯಲ್ಲಿ ಈ ಕಾಲವನ್ನು ನೇರ್ಪುಗೊಳಿಸುವ, ಜೀವಂತವಾಗಿ ಸಹ್ಯಗೊಳಿಸುವ, ಸ್ಫೂರ್ತಿಯನ್ನು ಚಿಮ್ಮಿಸುವ ಹಾಗೂ ಹೊಸ ಕನಸುಗಳೊಂದಿಗೆ ಬದುಕಿ ಬಾಳಬೇಕಾದವರಿಗೆ ಭರವಸೆಯಂತಿದೆ.

**ಪರಾಮರ್ಶನ ಗ್ರಂಥಗಳು:**

1. ಚಂದ್ರೇಗೌಡ ಬಿ. (2021). ಲಂಕೇಶ್ ಜೊತೆಗೆ. ಸಂಧ್ಯಾ ಪ್ರಕಾಶನ. ಶಿವಮೊಗ್ಗ.
2. ನಟರಾಜ್ ಹುಳಿಯಾರ್. (2014). ಇಂತಿ ನಮಸ್ಕಾರಗಳು. ಪಲ್ಲವ ಪ್ರಕಾಶನ. ಬಳ್ಳಾರಿ.
3. ಸುಗತ ಶ್ರೀನಿವಾಸರಾಜು. (2016). ಕಿತ್ತಳೆ ನೇರಳೆ ಪೇರಳೆ. ನವಕರ್ನಾಟಕ ಪ್ರಕಾಶನ. ಬೆಂಗಳೂರು.